ಪ್ರಬಂಧ

# ರಾಮನವಮಿ ಮತ್ತು ಖಲಂದರ್ ಸಾಹೇಬರು



**ಜಿ.ವಿ. ಆನಂದಮೂರ್ತಿ**

ಕಲೆ: ಸತೀಶ್ ಬಿರಾದಾರ್

ಈಗ ಆಚರಿಸುತ್ತಿರುವ ರಾಮನವಮಿ ಆಚರಣೆಗೂ, ಐವತ್ತು-ಅರವತ್ತು ವರ್ಷಗಳ ಹಿಂದೆ ನಮ್ಮ ಕೇರಿಯವರೆಲ್ಲಾ ಸಾಮೂಹಿಕವಾಗಿ ಅಚರಿಸುತ್ತಿದ್ದ ರಾಮನವಮಿಗೂ ಹೋಲಿಸಲಾಗದಷ್ಟು ಅಂತರವಿದೆ! ಶ್ರದ್ಧೆ ಮತ್ತು ದೈವದ ಪರಿಮಳವಿಲ್ಲದ ಇಂದಿನ ತೋರಾಣಿಕೆಯ ಆಚರಣೆಗಳನ್ನು ನೋಡಿದರೆ ಮನಸ್ಸು ಮುದುಡಿಕೊಳ್ಳುತ್ತದೆ. ದೇವರ ಹೆಸರಿನಲ್ಲಿ ಬೀದಿಗಳ ಮೇಲೆ ನಡೆಯುತ್ತಿರುವ ಹಿಂಸೆ, ಹರಿಯುತ್ತಿರುವ ರಕ್ತವನ್ನು ನೋಡಲು ನಾವು ಕಲ್ಲೆದೆಯವರಾಗಿರಬೇಕು! ಮುಂದೆ ಹಲವು ವರ್ಷಗಳ ತರುವಾಯ ಈ ದೇಶಕ್ಕೆ ಬಂದ ಯಾವನಾದರೂ ಒಬ್ಬ ಪ್ರವಾಸಿ ಕವಿ ಹೀಗೆ ಬರೆಯಬಹುದು '...ಆ ಹಬ್ಬದ ದಿನ ಇಲ್ಲಿನ ಬೀದಿಗಳಲ್ಲಿ ರಕ್ತ ಚೆಲ್ಲಿತ್ತು, ನನ್ನ ತುದಿಬೆರಳಿನಲ್ಲಿ ರಕ್ತವನ್ನು ಮುಟ್ಟಿದೆ, ದೇಹವೊಂದರಿಂದ ಆಗತಾನೆ ಹರಿದ ಹಸಿ ರಕ್ತ ತನ್ನ ಜಾತಿ, ಧರ್ಮವನ್ನು ಹೇಳಲಿಲ್ಲ! ಅದು ಹೇಳಿತು; ನಾನೊಬ್ಬ ಬಡವ ಎಂದು!'

ಸಾಮೂಹಿಕ ಪಾಲ್ಗೊಳ್ಳುವಿಕೆಯ ಹಬ್ಬಗಳ ಮೂಲಕ ನಮ್ಮ ಸಾಮಾಜಿಕ ಬದುಕಿನಲ್ಲಿ ನಾವು ಏನೆಲ್ಲವನ್ನೂ ಕಳೆದುಕೊಂಡಿದ್ದೇವೆ ಎಂದು ನೆನೆದರೆ ದಿಗಿಲಾಗುತ್ತದೆ! ಈ ಮೂಲಕ ಮನಸ್ಸಿನ ಕಗ್ಗತ್ತಲೆಯ ಮೂಲೆಯಲ್ಲಿ ಎಂದೋ ಅವಿತಿದ್ದ ನಮ್ಮೂರಿನ ರಾಮನವಮಿ ಆಚರಣೆಯ ವಿವರಗಳೆಲ್ಲಾ ಜೀವ ಪಡೆದು ಮುಂದೆ ಬಂದವು. ಅಂದಿನ ರಾಮನವಮಿ ಹಬ್ಬದ ಅಳಿದುಳಿದ ನೆನಪುಗಳನ್ನು ಹೀಗೆ ಜೋಡಿಸಿ ನಿಮ್ಮ ಮುಂದಿಡಲು ಪ್ರಯತ್ನಿಸಿದ್ದೇನೆ.

ಯುಗಾದಿಯೇ ನಮಗೆಲ್ಲಾ ವರ್ಷದ ದೊಡ್ಡ ಹಬ್ಬ. ಅವರಿವರ ಬಳಿಯಲ್ಲಿ ಗೋಗರೆದು ಸಾಲಮಾಡಿ ತರುತ್ತಿದ್ದ ಅರವತ್ತು-ಎಪ್ಪತ್ತು ರೂಪಾಯಿಯಲ್ಲಿ ಮನೆಮಂದಿಯೆಲ್ಲಾ ಹೊಸಬಟ್ಟೆ ಹೊಲೆಸಿಕೊಂಡು, ಎಲ್ಲರೂ ನೋಡಲಿ ಎಂದು ಕೇರಿಯಲ್ಲೆಲ್ಲಾ ಅಡ್ಡಾಡುತ್ತಿದ್ದ ನೆನಪುಗಳು ಈಗಲೂ ನಮ್ಮನ್ನು ಕಾಡುತ್ತವೆ. ನಮಗೆಲ್ಲಾ ಯುಗಾದಿಯ ಹಬ್ಬದ ಮಂಪರು ನಿಧಾನವಾಗಿ ಇಳಿಯುತ್ತಿದ್ದುದು ರಾಮನವಮಿ ಮುಗಿದ ನಂತರ. ಯುಗಾದಿ ಹಬ್ಬಕ್ಕಾಗಿ ನಮ್ಮ ಮನೆಗಳಿಗೆ ಹಾಗೂ ದನದ ಕೊಟ್ಟಿಗೆಗಳಿಗೆ ಕಟ್ಟಿದ್ದ ಮಾವು ಮತ್ತು ಬೇವಿನ ತೋರಣಗಳು ಬಾಡುತ್ತಿದ್ದುದು ರಾಮನವಮಿ ನಂತರವೇ! ರಾಮನವಮಿ ಹಬ್ಬದವರೆಗೂ ತಾವು ಮಾಡಿದ ಹುರುಳಿ ಒಬ್ಬಟ್ಟನ್ನು ಸ್ವಾರೆಬಾನಿಗಳ ತಳದಲ್ಲಿಟ್ಟು ದಿನವೂ ಕೊಡುತ್ತಿದ್ದ ಸೋದರತ್ತೆಯರಾದ ಲಕ್ಕವ್ವ,